Filling up vacant posts of Deputy Health Officers (Grade Officers).

502 SRI T. R. SHAMANNA.(Basavanagudi).—Will the Minister for Health be pleased to state.—

(a) the number of posts of Deputy Health Officers (I-Grade-Officers) in the Health Department which are now vacant ;

(b) the steps the Government has taken to fill up the vacant posts;

(c) whether the vacant posts will be filled up according to Seniority and merit of the officers in the said Department ;

(d) if so, when the vacant posts will be filled up ?

SRI M. MALLAPPA (Minister for Health and Family Welfare).—

(a) There are no posts of Deputy Health Officer in the Department of Health and Family Welfare (However five posts of Health Officer Class I Senior are vacant.

(b) Steps are being taken to fill up the posts by promotion.

(c) Yes.

(d) Will be filled up shortly.

ಶ್ರೀ ಟಿ. ಆರ್. ಶಾಮಣ್ಣ.—ಸ್ವಾಮಿ, ತಮ್ಮ ಹೆಲ್ತ್ ಡಿಪಾರ್ಟ್‌ಮೆಂಟಿನಿಂದ ಕಾರ್ಪೊರೇಷನ್ ಮೊದಲಾದಂಥ ಸಂಸ್ಥೆಗಳಿಗೆ ಡೆಪ್ಯುಟೇಷನ್ ಮೇಲೆ ಕಳಿಸಿದಂಥ ಆಫೀಸರ್ಸ್ ಹಾಗೂ ಆಫಿಷಿಯಲ್ಸ್‌ನ್ನು ವಾಪಸ್ಸು ಕರೆಸಿಕೊಳ್ಳುವುದಕ್ಕೆ ನಿಯಮಾವಳಿ ಇದೆಯೇ ? ಹಾಗೆ ನಿಯಮಾವಳಿ ಇದ್ದರೆ, ಅದನ್ನು ಆ ಪ್ರಕಾರ ಆಚರಣೆಗೆ ತರುತ್ತೀರಾ ಎಂಬುದನ್ನು ಹೇಳಬೇಕು.

ಶ್ರೀ ಎಂ. ಮಲ್ಲಪ್ಪ —ನಿಯಮಾವಳಿ ಪ್ರಕಾರ ಅವರನ್ನು ಕಳಿಸತಕ್ಕಂಥ ಮತ್ತು ಕರೆಸಿಕೊಳ್ಳತಕ್ಕಂಥಾದ್ದು ಇದೆ.

೯–೩೦ ಎ. ಎಂ.

ಶ್ರೀ ಟಿ. ಆರ್. ಶಾಮಣ್ಣ.—ಕೆಲವರನ್ನು ೩ ವರ್ಷಗಳಿಗೆ ಮುಂಚಿತವಾಗಿಯೇ ಟ್ರಾನ್ಸ್‌ಫರ್ ಮಾಡುತ್ತೀರಿ, ಇನ್ನು ಕೆಲವರನ್ನು ೧೦–೧೨ ವರ್ಷಗಳಿಂದಲೂ ಅಲ್ಲೇ ಇಟ್ಟಿದ್ದೀರಿ ಸೀನಿಯರ್ ಹೆಲ್ತ್ ಇನ್‌ಸ್ಪೆಕ್ಟರ್ ಒಬ್ಬರು ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಆಗಿದ್ದರೂ ಕೂಡ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಎಕ್ಸ್‌ಟೆನ್‌ಷನ್ ತೆಗೆದುಕೊಂಡು ತಮಗೆ ಇಷ್ಟಬಂದ ಕಡೆಗೇ ಹಾಕಿಸಿಕೊಳ್ಳುತ್ತಿದ್ದಾರೆ ಇದು ಸರ್ಕಾರದ ಗಮನಕ್ಕೆ ಬಂದಿದೆಯೆ ? ನೀವು ಇದರ ಬಗ್ಗೆ ಕ್ರಮ ತೆಗೆದುಕೊಂಡು ಅವರನ್ನು ವಾಪಸು ಕರೆಸಿಕೊಳ್ಳುತ್ತೀರಾ?

ಶ್ರೀ ಎಂ ಮಲ್ಲಪ್ಪ.— ಕಾರ್ಪೊರೇಷನ್‌ನವರು ಇಂಥವರ ಸೇವೆ ಬೇಕೆಂದು ಕೇಳಿದರೆ ಅಂಥವರನ್ನು ಕಳುಹಿಸುತ್ತೇವೆ. ಅವರು ಬೇಡ ಎಂದು ಹೇಳಿದರೆ ವಾಪಸು ಕರೆಸಿಕೊಳ್ಳುತ್ತೇವೆ. ಆದರೆ ಇಲ್ಲಿ ಸುಮಾರು ೭–೮ ವರ್ಷಗಳ ಕಾಲ ಸುಪ್ರೀಂ ಕೋರ್ಟ್‌ಗೆ ಹೋಗಿ ಜಡ್ಜ್‌ಮೆಂಟ್ ಆಗಿದ್ದರೂ ಇನ್ನೂ ಅಲ್ಲೇ ಇದ್ದಾರೆಂದು ತಾವು ಏನು ಹೇಳಿದಿರಿ ಅದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ಅವರು ಮಂತ್ರಿಗಳ ಪ್ರಭಾವದಿಂದ ಈ ರೀತಿ ಮುಂದುವರಿಯುತ್ತಿದ್ದಾರೆ. ಕಾರ್ಪೊರೇಷನ್‌ಗೆ ನಿಮ್ಮ ಅಧಿಕಾರಿಗಳು ಡೆಪ್ಯುಟೇಷನ್ ಬರುತ್ತಿರುವುದರಿಂದ ನಮ್ಮ ನಗರಸಭೆಯ ನೌಕರರ ಭವಿಷ್ಯ ಹಾಳಾಗುತ್ತಿದೆ. ಆದ್ದರಿಂದ ಈ ಡೆಪ್ಯುಟೇಷನ್ ಸಿಸ್ಟಂನ್ನು ನಿಲ್ಲಿಸಿ ನಮ್ಮ ನೌಕರರಿಗೆ ತೊಂದರೆ ಆಗದಂತೆ ಮಾಡುತ್ತೀರಾ?

ಶ್ರೀ ಎಂ. ಮಲ್ಲಪ್ಪ.—ಆಗಲಿ ಮಾಡೋಣ.

ಶ್ರೀ ಐ. ಪಿ. ಡಿ. ಸಾಲಪ್ಪ.—ಕಾರ್ಪೊರೇಷನ್‌ಗೆ ಡೆಪ್ಯುಟೇಷನ್ ಕಳುಹಿಸುವುದರಲ್ಲಿ ಹರಿಜನರಿಗೆ ಸರಿಯಾದ ಪ್ರಾತಿನಿಧ್ಯ ಸಿಕ್ಕುತ್ತಿಲ್ಲ. ಇನ್ನು ಮುಂದಾದರೂ ಅವರಿಗೆ ಸರಿಯಾದ ಪ್ರಾತಿನಿಧ್ಯ ಸಿಕ್ಕುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಪ್ಪ.— ಹರಿಜನರನ್ನು ಕಾರ್ಪೊರೇಷನ್‌ಗೆ ಡೆಪ್ಯುಟೇಷನ್ ಕಳಿಸಬಾರದೆಂದು ನಮ್ಮ ಉದ್ದೇಶವಿಲ್ಲ. ಈ ಡಾಕ್ಟರ್‌ಗಳನ್ನು ನಾವು ರೊಟೇಷನ್ ಮೇಲೆ ಹಾಕುತ್ತಿದ್ದೇವೆ. ಒಂದು ವರ್ಷ ಅವರು ಹಳ್ಳಿಗಳಿಗೆ ಹೋಗಬಹುದು ಇನ್ನೊಂದು ವರ್ಷ ಮುನಿಸಿಪಾಲಿಟಿಗಳಿಗೆ ಹೋಗಬಹುದು, ಮತ್ತೊಂದು ವರ್ಷ ಪಿ. ಹೆಚ್. ಸಿ. ಗೆ ಹೋಗಬಹುದು. ಆದರೆ ನಾವು ಯಾರಿಗೂ ತಾರತಮ್ಯ ಮಾಡುತ್ತಿಲ್ಲ.

ಶ್ರೀ ಐ. ಪಿ. ಡಿ ಸಾಲಪ್ಪ.—ಬೇರೆ ಜಾತಿಯವರನ್ನು ಮುನಿಸಿಪಾಲಿಟಿ, ಕಾರ್ಪೊರೇಷನ್‌ಗಳಿಗೆ ಹಾಕಿ, ಹರಿಜನರನ್ನು ಹಾಕದೇ ಇರುವುದಕ್ಕೆ ಕಾರಣ ಏನು ? ಇವರಿಗೆ ಅರ್ಹತೆ ಇಲ್ಲವೆ ? ಇನ್ನು ಮುಂದಾದರೂ ಹರಿಜನರನ್ನು ಮುನಿಸಿಪಾಲಿಟಿಗಳಿಗೆ ಹಾಕುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಪ್ಪ.— ತಾವು ಹೇಳುತ್ತಿರುವುದರಲ್ಲಿ ಹುರುಳಿಲ್ಲ. ನಾನು ಮೊದಲೇ ಹೇಳಿದಂತೆ ಈ ವಿಚಾರದಲ್ಲಿ ತಾರತಮ್ಯ ಮಾಡುತ್ತಿಲ್ಲ. ಈ ವರ್ಷದಲ್ಲಿ ಸುಮಾರು ೩೦೦ ಜನ ಡಾಕ್ಟರ್‌ಗಳನ್ನು ಹೊಸದಾಗಿ ನೇಮಕ ಮಾಡಿಕೊಂಡು ಎಲ್ಲ ಕಡೆಗಳಿಗೂ ಹಾಕಿತ್ತಿದ್ದೇವೆ. ತಮ್ಮ ಪ್ರಶ್ನೆ ಊಹೆಗೆ ನಿಲುಕದ್ದು

ಅಧ್ಯಕ್ಷರು.—ಪ್ರಶ್ನೆ ನಂ. ೫೧೮, ೭೨೮ ಹಾಗೂ ೭೯೫ ತಡೆಹಿಡಿಯಲಾಗಿವೆ.

Misappropriation of funds in LSCS Thimmana Hally, C. N. Hally Taluk, Tumkur District.

836 SRI T. B.JAYACHANDRA (Kallambella)—Will the Minister for Co-operation be pleased to state.

(a) whether the Government is aware that there is misappropriation of funds at LSCS., Thimmana Hally, C. N. Hally Taulk, Tumkur District ;

(b) if so, the amount misappropriated and the names of the persons responsible for the said misappropriation ;

(c) the legal action taken against the persons, who have misappropriated funds in the said society ?

SRI V. M.KUSHNOOR (Minister for Co-operation).—

(a) Yes, Sir,

(b) (i) Rs 31,021.00 misappropriated by Sri Lakshmikanthacharya, Ex-salesman. of the society. (ii) Rs. 3212-50 misappropriated by Sri T. Chandrashekariah, Ex-Secretary of the society.

(c)—